# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 2008 |
| ಸದಸ್ಯರ ಹೆಸರು | : ಶ್ರೀ ಎನ್.ಎಸ್. ಬೋಸ್‌ರಾಜು |
| ಉತ್ತರಿಸುವ ಸಚಿವರು | : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು |
| ಉತ್ತರಿಸುವ ದಿನಾಂಕ | : 27-03-2020 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಸಾರಿಗೆ ಸಂಸ್ಥೆಗಳು 7ನೇ ತರಗತಿವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸುತ್ತಿರುತ್ತದೆ.<br>2017-18ನೇ ಸಾಲಿನಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸುತ್ತಿರುತ್ತದೆ.<br>ಉಳಿದಂತೆ ಇತರೆ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ರಿಯಾಯಿತಿ ಬಸ್ ಪಾಸ್ ವಿತರಿಸಲಾಗುತ್ತಿದೆ. |
| ಆ | ರಾಯಚೂರಿನಿಂದ ಬೆಂಗಳೂರಿಗೆ ಸಂಚರಿಸುತ್ತಿರುವ A.C. Sleeper Coach ಬಸ್ಸುಗಳ ಸಂಖ್ಯೆ ಎಷ್ಟು; | ರಾಯಚೂರ-ಬೆಂಗಳೂರು ಮಂತ್ರಾಲಯ ಮಾರ್ಗದಲ್ಲಿ 2 ಎಸಿ ಸ್ಲೀಪರ್ ಕೋಚ್ ಬಸ್ಸುಗಳು ಕಾರ್ಯಾಚರಣೆಯಲ್ಲಿರುತ್ತವೆ. ರಾಯಚೂರು ವಿಭಾಗದ ರಾಯಚೂರು ಘಟಕ-3ರಿಂದ ಅನುಸೂಚಿ ಸಂಖ್ಯೆ 1/2ರಲ್ಲಿ ಹಾಗೂ ಬೆಂಗಳೂರು ಕೇಂದ್ರೀಯ ವಿಭಾಗದ ಬೆಂಗಳೂರು-2ನೇ ಘಟಕದಿಂದ ಅನುಸೂಚಿ ಸಂಖ್ಯೆ 15/16ರಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ. |
| ಇ | ಮಾನ್ವಿಯಿಂದ ಬೆಂಗಳೂರಿಗೆ A.C. Sleeper Coach ಬಸ್ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಈ.ಕ.ರ.ಸಾ.ಸಂಸ್ಥೆಯ ದೇವದುರ್ಗ ಘಟಕದಿಂದ ಸಿರವಾರ, ಮಾನ್ವಿ ಮಾರ್ಗವಾಗಿ ಬೆಂಗಳೂರಿಗೆ ನಾನ್ ಎಸಿ ಸ್ಲೀಪರ್ ಸಾರಿಗೆ ಕಾರ್ಯಾಚರಣೆಯಲ್ಲಿರುತ್ತದೆ. ಈ ಸಾರಿಗೆಯ ಪ್ರತಿ ಕಿ.ಮೀ. ವೆಚ್ಚ ರೂ.43.00ರಷ್ಟಿದ್ದು, ಸರಾಸರಿ ಇಪಿಕೆಎಂ ರೂ.26.50ರಷ್ಟಿರುತ್ತದೆ. ಕಾರ್ಯಾಚರಣೆಯ ವೆಚ್ಚಕ್ಕಿಂತ ಇಪಿಕೆಎಂ ಅತೀ ಕಡಿಮೆ ಇರುವುದರಿಂದ, ಸಂಸ್ಥೆಗೆ ಪ್ರತಿ ಕಿ.ಮೀ.ಗೆ ರೂ.16.50ರಷ್ಟು ನಷ್ಟವಾಗುತ್ತಿದೆ. ಇದರಿಂದಾಗಿ ಪ್ರಸ್ತುತ ಮಾನ್ವಿ-ಬೆಂಗಳೂರು ಮಾರ್ಗದಲ್ಲಿ ಎಸಿ ಸ್ಲೀಪರ್ ಬಸ್ ಕಾರ್ಯಾಚರಣೆ ಮಾಡುವುದು ಸಂಸ್ಥೆಯ ಆರ್ಥಿಕ ಹಿತದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲ. |

ಸಂಖ್ಯೆ: ಟಿಡಿ 139 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು